ತಂಡೀ ದಿನಾ ಬ್ಯಾರೆ' ಎಂದು ಮನದಲ್ಲೇ ಮಜ್ಜಿಗೆ ಕಡಿಯತೊಡಗಿದ್ದಳು. ದೇವಾನು ದೇವತೆಗಳು ನಡೆಸಿದ ಸಮುದ್ರ ಮಥನದಿಂದ ಏನೆಲ್ಲಾ ಬಂದವು. ಆದರೆ, ಸಾವಕ್ಕನ ಮನ ಮಂಥನದಿಂದ ಯಾವುದೂ ಬಗೆ ಹರಿಯಲಿಲ್ಲ. ಗಂಡ, ಮಗ ಇದ್ದಿದ್ದರೆ ತನ್ನಲ್ಲಿ ಆನೆ ಬಲ ಬಂದಿರುತ್ತಿತ್ತು ಇಂತಹ ಪರಿಸ್ಥಿತಿಯನ್ನು ನಿಭಾಯಿಸಲು ಎಂದುಕೊಳ್ಳುತ್ತಿದ್ದಳು.

ಇದ್ದೊಬ್ಬ ಮಗ ಕೈಗೆ ಬರುತ್ತಿದ್ದಂತೆಯೇ ಸಾವಕ್ಕ ಬಾಸಿಂಗ ಕಟ್ಟಿಸಿದ್ದಳು. ಹರಿಯುವ ನೀರಿನಲ್ಲಿ ಬಿಟ್ಟ ಕಾಗದದ ದೋಣಿಯಂತೆ ಮದುವೆಯ ನಂತರ ಹೆಂಡತಿಯೊಂದಿಗೆ ಮಗ ಪಟ್ಟಣ ಸೇರಿದ್ದ. ಸಣ್ಣಂದಿನಿಂದಲೂ ಸೈಕಲ್ಲು, ಸ್ಕೂಟರು, ಕಾರು ಎಂದು ಹುಚ್ಚು ಹತ್ತಿಸಿಕೊಂಡಿದ್ದ ಪ್ರಕಾಶಿ ಓದುವುದನ್ನು ಬಿಟ್ಟು ಗೌಡರ ಮನೆಯ ಕಾರು ಚಾಲಕನಾಗಿ ಸೇರಿಕೊಂಡಿದ್ದ. ಮದುವೆಯ ನಂತರ ಪ್ರಕಾಶಿಯ ಹೆಂಡತಿ ಬೆಂಗಳೂರಿನಲ್ಲೇ ಮನೆ ಮಾಡಬೇಕೆಂದು ಹಟ ಹಿಡಿದಾಗ ತೂಕಡಿಸುವವನಿಗೆ ಹಾಸಿ ಕೊಟ್ಟಂತಾಗಿತ್ತು. ಪ್ರಕಾಶಿಯ ಹೆಂಡತಿಯ ಅಣ್ಣ ಬೆಂಗಳೂರಿನಲ್ಲಿ ಕ್ಯಾಬ್ ಡ್ರೈವರ್ ಆಗಿದ್ದ. ಅವನ ಸಹಾಯದಿಂದ ಮದುವೆಯಾಗಿ ತಿಂಗಳು ತುಂಬಗೊಡುವುದರಲ್ಲಿ ಹೆಂಡತಿಯೊಂದಿಗೆ ಬೆಂಗಳೂರು ಸೇರಿದ್ದ. ಮಗನ ಮದುವೆ ಮಾಡಿದ್ದೇ ತಪ್ಪಾಯಿತೇನೋ ಎಂದು ಸಾವಕ್ಕ ಹಳ ಹಳಿಸಿದ್ದಳು. ಮಗ ಬೆಂಗಳೂರು ಸೇರಿದ ಬೆನ್ನಲ್ಲೇ ಗೂರಲು ಗಂಡ ಉಸಿರು ಚೆಲ್ಲಿದಾಗ ಸಾವಕ್ಕ ಅಬಲಿಯಾಗಿದ್ದಳು. ಕಣ್ಣಿನ ನದರು ಕಡಿಮೆಯಾಗಿದ್ದರಿಂದ ಕೂಲಿ ನಾಲಿಗೂ ಯಾರೂ ಕರೆಯುತ್ತಿರಲಿಲ್ಲ. ಮನೆಯ ಹಿಂದೆ ಇದ್ದ ಕೆರೆ ಅಂಗಳದಲ್ಲಿ ಅಡ್ಡಾಡಿ ಸಗಣಿ ತಂದು ಕುಳ್ಳು ಬಡಿಯುವ ಕಾಯಕ ಹಚ್ಚಿಕೊಂಡಿದ್ದಳು. ಒಣಗಿದ ಕುಳ್ಳುಗಳು ಬಾಣಂತಿಯರ ಮನೆಯ ಉರುವಲಿಗೆ ಬಿದ್ದು ಸಾವಕ್ಕನ ಹೊಟ್ಟೆಯನ್ನು ತುಂಬಿಸುತ್ತಿದ್ದವು. ಅಪ್ಪನ ಹೆಣಕ್ಕೆ ಮೂರು ಬೊಗಸೆ ಮಣ್ಣು ಹಾಕಿ ಹೋದ ಮಗ ಹಳ್ಳಿಯ ಕಡೆ ಸುಳಿದಿರಲಿಲ್ಲ. ಹರಕು ಜಂತಿ, ಮುರುಕು ಮಾಳಿಗೆಯ ಕೆಳಗೆ ದಿನಗಳನ್ನು ದೂಡುತ್ತಿದ್ದ ಸಾವಕ್ಕನಿಗೆ ಪಂಚಾಯ್ತಿಯಲ್ಲಿ ಕಸ ಗುಡಿಸುತ್ತಿದ್ದ ಪಕ್ಕೀರ, "ಬೇ ಮುದಕಿ, ಎಷ್ಟ್ ದಿನಾ ಅಂತ ದನಗೋಳ ಮುಕಳೀಗೆ ಬುಟ್ಟಿ ಹಿಡೀತಿಬೆ, ಮಳಿಗಾಲದಾಗ ಕುಳ್ಳೂ ಒಣಗಂಗಿಲ್ಲ. ತಿಂಗಳಾ ತಿಂಗಳಾ ಪಿಂಚಣಿ ಬರೂ ಹಂಗ್ ಮಾಡಸಗೋ'' ಎಂದು ಹೇಳುತ್ತಲೇ ಇದ್ದ. ಆದರೆ ಪಿಂಚಣಿ ಮಾಡಿಸಿಕೊಳ್ಳುವುದಕ್ಕೆ ಯಾರನ್ನ ಕೇಳಬೇಕು, ಏನು ಮಾಡಬೇಕೆಂಬುದೇ ಆಕೆಗೆ ದೊಡ್ಡ ಪ್ರಶ್ನೆಯಾಗಿತ್ತು.

ರಾತ್ರಿ ರೊಟ್ಟಿ ಮುರಿದು ಬಾಯಿಗಿಡುತ್ತಿದ್ದಂತೆಯೇ, "ಯಕ್ಕಾ, ಊರಾಗ್ ಏನಾ ಸುದ್ದಿ ಹೊಂಟತಿ ಅಲ್ಲಬೇ ಖರೇ ಏನ್?'' ಎಂದು ನೆರೆಮನೆಯ ಈರವ್ವ ಎಲೆಯಡಿಕೆಯ ಚಂಚಿ ಬಿಚ್ಚತೊಡಗಿದಳು. "ಏ ಬಿಡಬೇ ಆ ಪಕ್ಕೀರಗ ಮಾಡಾಕ ಕೆಲಸ ಇಲ್ಲ. ಅರಹುಚ್ಚನಂತಾದ, ಬಾಯಿಗಿ ಬಂದಿದ್ದ್ ಮಾತಾಡತತಿ" ಎಂದಾಗ ಈರವ್ವ ಪಟ್ಟು ಬಿಡದೇ, "ಏ ಇಲ್ಲಬೇ ನಮ್ಮ ಶಿವಣ್ಣ ಪಂಚಾತಿ ಕಡೆ ಹೋಗಿದ್ದನಂತ. ಸುದ್ದಿ ಖರೇನಬೇ ಯಕ್ಕಾ" ಎಂದಳು. ''ಮಂತ್ರಿಗೋಳು ನಿನ್ನ ಮನೀಗಿ ಬಂದು ಹೋಳಿಗಿ ತುಪ್ಪಾ ಉಂಡ್, ಒಂದ್ ರಾತ್ರಿ ವಸ್ತಿ ಇದ್ದ್ ಹೊಕ್ಕಾರ್ ಅಂತ. ಪುಣ್ಣೆ ಮಾಡಿ ಬೀಡ್ ಯಕ್ಕಾ ನೀನ್. ನಾವೂ ಅದೇವಿ. ಆ ದೇವರ ಕಣ್ಣಾಗ ಮಣ್ಣ್ ತುಂಬಲಿ ನಾವೇನ್ ಅಂತಾದ್ದ್ ಮಾಡೇವೋ ಏನೋ" ಎಂದು ನೆಟಿಕೆ ಮುರಿದು ತನ್ನ ಅಸಮಧಾನವನ್ನು ತೋಡಿಕೊಂಡಳು. ಗೌಡರ ಅಟ್ಟದ ಮನೆಯನ್ನು ಬಿಟ್ಟು ಗ್ವಾದನಿ ಅಂತಾ ನನ್ನ್ ಮನೀಗಿ ಬರಾಕತ್ತಾರ. ಬರವರಿಗೇರ ತಿಳೀಬಾರದ? ಹಾಲು ತುಪ್ಪದಾಗ ಉಳ್ಳ್ಯಾಡು ಮಂದಿ ಅದ. ಕೈಗೊಂದ್ ಕಾಲಿಗೊಂದ್ ಆಳ ಇಟಗೊಂಡ್ ಕಾರ್ ಗಾಡ್ಯಾಗ ಓಡ್ಯಾಡವರು. ನನ್ನ ಮನ್ಯಾಗ್ ಒಂದ್ ದಿನಾ ವಸ್ತಿ ಮಾಡಿ ಅದೇನ್ ಪಡಕೊಂಡ್ ಹೊಕ್ಕಿದ್ದಾರೋ ಏನೋ. ಮಂತ್ರಿಗೋಳು ಯಾರ ಮನ್ಯಾಗ ವಸತಿ ಇರತಾರೋ ಅವರ ಮನಿ ದುರಸ್ತಿ ಮಾಡಿಸಿ, ಸುಣ್ಣಾ ಬಣ್ಣಾ ಮಾಡತಾರ ಅಂತ ಈರವ್ವನ ಮಗಾ ಶಿವಣ್ಣ ಹೇಳ್ಯಾನಂತ. ತನ್ನ ಮನೆಯ ಒಡೆದ ಕರಿ ಹಂಚಿನ ಜಾಗದಲ್ಲಿ ಕೆಂಪು ಮಂಗಳೂರು ಹಂಚುಗಳು ಕಾಣ ತೊಡಗಿದವು. ಹಕ್ಕಳೆ